ಕರ್ನಾಟಕ ಸರ್ಕಾರ
(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ:ಬಿಟಿಇ/13/ಇಹಿಎಸ್/2013.

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:16-03-2017.

ಸು ತ್ತೋ ಲೆ

ವಿಷಯ: ತಾಂತ್ರಿಕ ಪರೀಕ್ಷಾ ಮಂಡಳಿಯ ಸಕಾಲ ಸೇವೆಗಳನ್ನು ಕಡ್ಡಾಯವಾಗಿ ಸಕಾಲ ತಂತ್ರಾಂಶದಲ್ಲೇ (SAKALA PORTAL) ನೀಡುವ ಬಗ್ಗೆ.

ಉಲ್ಲೇಖ:1.ಡಿಐಜಿ ಮತ್ತು ಅಪರ ಮಿಷನ್ ನಿರ್ದೇಶಕರು, ಸಕಾಲ ಮಿಷನ್ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಸಿ.ಆ.ಸು.ಇ./20/ನಾಸೇಖಾ/2016, ದಿನಾಂಕ:15-02-2016.
2.ಸರ್ಕಾರದ ಪತ್ರ ಸಂಖ್ಯೆ:ಇಡಿ 29 ಟಿಇಎಲ್ 2016, ದಿನಾಂಕ:05-03-2016.
3.ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/13/ಇಹಿಎಸ್/2013. ದಿ:30-06-2016.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಪರೀಕ್ಷಾ ಮಂಡಳಿಯ ಹತ್ತು ಸಕಾಲ ಸೇವೆಗಳಿಗಾಗಿ ಅರ್ಹ ವಿದ್ಯಾರ್ಥಿಗಳಿಂದ ಸ್ವೀಕರಿಸಲಾಗುವ ಎಲ್ಲಾ ಅರ್ಜಿಗಳನ್ನು ಕಡ್ಡಾಯವಾಗಿ ಸಕಾಲ ಮಿಷನ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿ GSC ACKNOWLEDGEMENT SLIP ಅನ್ನು ವಿದ್ಯಾರ್ಥಿಗಳಿಗೆ ನೀಡಲು ಮತ್ತು ವಿದ್ಯಾರ್ಥಿಗಳ ಅರ್ಜಿಗಳನ್ನು & ಪ್ರಿನ್ಸಿಪಾಲರಿಂದ ದೃಢೀಕರಿಸಲ್ಪಟ್ಟ ಅಗತ್ಯ ಲಗತ್ತುಗಳನ್ನು ಸಂಸ್ಥೆಯ ಹಂತದಲ್ಲಿಯೇ ಕೂಲಂಕುಷವಾಗಿ ಪರಿಶೀಲಿಸಿ ಮಂಡಳಿಗೆ ಕೂಡಲೆ ರವಾನಿಸಲು ಉಲ್ಲೇಖ(3)ರಲ್ಲಿ ಸೂಚಿಸಲಾಗಿತ್ತು.

ಮುಂದುವರೆದು ಮಂಡಳಿಯಲ್ಲಿ ಸ್ವೀಕರಿಸಲಾಗುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಅನುವಾಗುವಂತೆ ವಿದ್ಯಾರ್ಥಿಗಳು ವಿವಿಧ ಸೇವೆಗಳಿಗಾಗಿ ಸಲ್ಲಿಸುವ ಅರ್ಜಿಗಳನ್ನು ಕೆಳಗೆ ತಿಳಿಸಿರುವಂತೆ ಬೇರೆ ಬೇರೆಯಾಗಿ ವಿಂಗಡಿಸಿ ವಿಷಯವಾರು ಮಂಡಳಿಗೆ ರವಾನಿಸಲು ತಿಳಿಸಲಾಗಿದೆ.

1. ವಾರ್ಷಿಕ ಪದ್ಧತಿಯ ವಿದ್ಯಾರ್ಥಿಗಳ ಡಿಪ್ಲೋಮಾ ಪ್ರಮಾಣ ಪತ್ರಕ್ಕಾಗಿ ಮನವಿಗಳು.
2. ವಾರ್ಷಿಕ ಪದ್ಧತಿಯ ವಿದ್ಯಾರ್ಥಿಗಳ ಅಂಕಪಟ್ಟಿಗಳಿಗಾಗಿ ಮನವಿಗಳು.
3. ಸೆಮಿಸ್ಟರ್ ಪದ್ಧತಿಯ ವಿದ್ಯಾರ್ಥಿಗಳ ಡಿಪ್ಲೋಮಾ ಪ್ರಮಾಣ ಪತ್ರಗಳಿಗಾಗಿ ಮನವಿಗಳು (03, 04 ಮತ್ತು 05 Year wise ಸೀರೀಸ್ ಮಾತ್ರ)
4. ಸೆಮಿಸ್ಟರ್ ಪದ್ಧತಿಯ ವಿದ್ಯಾರ್ಥಿಗಳ ಡಿಪ್ಲೋಮಾ ಪ್ರಮಾಣ ಪತ್ರಗಳಿಗಾಗಿ ಮನವಿಗಳು (06 ಸೀರೀಸ್ ಮತ್ತು ನಂತರ Year wise ಸೀರೀಸ್‌ಗಳು ಉದಾ: 06, 07, 08 ಇತ್ಯಾದಿ.)
5. ವಾರ್ಷಿಕ ಪದ್ಧತಿಯ ವಿದ್ಯಾರ್ಥಿಗಳ ನಕಲು ಅಂಕಪಟ್ಟಿಗಳಿಗಾಗಿ ಮನವಿಗಳು.
6. ಸೆಮಿಸ್ಟರ್ ಪದ್ಧತಿಯ ವಿದ್ಯಾರ್ಥಿಗಳ ನಕಲು ಅಂಕಪಟ್ಟಿಗಳಿಗಾಗಿ ಮನವಿಗಳು.
7. ವಾರ್ಷಿಕ ಪದ್ಧತಿಯ ವಿದ್ಯಾರ್ಥಿಗಳ ಪರಿಷ್ಕೃತ ಅಂಕಪಟ್ಟಿಗಳಿಗಾಗಿ ಮನವಿಗಳು.
8. ಸೆಮಿಸ್ಟರ್ ಪದ್ಧತಿಯ ವಿದ್ಯಾರ್ಥಿಗಳ ಪರಿಷ್ಕೃತ ಅಂಕಪಟ್ಟಿಗಳಿಗಾಗಿ ಮನವಿಗಳು.
9. ಅಂಕಪಟ್ಟಿಗಳಲ್ಲಿ ವಿದ್ಯಾರ್ಥಿಗಳ ಹೆಸರು ತಿದ್ದುಪಡಿಗಾಗಿ ಮನವಿಗಳು.
10. ವಿದ್ಯಾರ್ಥಿಗಳ ಪರಿಷ್ಕೃತ ಡಿಪ್ಲೋಮಾ ಪ್ರಮಾಣ ಪತ್ರಗಳಿಗಾಗಿ ಮನವಿಗಳು.
11. ವಿದ್ಯಾರ್ಥಿಗಳ ನಕಲು ಡಿಪ್ಲೋಮಾ ಪ್ರಮಾಣ ಪತ್ರಗಳಿಗಾಗಿ ಮನವಿಗಳು

ಮೇಲ್ಕಂಡ ವಿವರಗಳನುಸಾರ ಅರ್ಜಿಗಳನ್ನು ವಿಂಗಡಿಸಿ ಪ್ರತಿಯೊಂದಕ್ಕೂ ಬೇರೆ ಬೇರೆ ವಿಷಯವಾರು ಕವರಿಂಗ್ ಲೆಟರ್‌ಗಳ ಸಹಿತ ಒಂದೇ ಬಂಡಲ್‌ನಲ್ಲಿ ಹಾಕಿ ಮಂಡಳಿಗೆ ರವಾನಿಸಲು ತಿಳಿಸಲಾಗಿದೆ.

ಪ್ರಯುಕ್ತ ಎಲ್ಲಾ ಸಂಸ್ಥೆಗಳ ಪ್ರಿನ್ಸಿಪಾಲರುಗಳು ಈ ವಿಷಯದಲ್ಲಿ ವೈಯಕ್ತಿಕ ಮುತುವರ್ಜಿ ವಹಿಸಲು ಮತ್ತು **SAKALA PORTAL** ಮೂಲಕ ವಿದ್ಯಾರ್ಥಿಗಳ ಅರ್ಜಿಗಳನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡಲು ಮತ್ತೊಮ್ಮೆ ಸೂಚಿಸಿದೆ.

ಮೇಲ್ಕಂಡ ವಿಷಯಗಳಲ್ಲಿ ಸ್ಪಷ್ಟೀಕರಣಕ್ಕಾಗಿ ಶ್ರೀ ಹೆಚ್.ಟಿ.ಪ್ರಕಾಶ್, ತಾಂತ್ರಿಕ ಸಹಾಯಕರು, ಇವರನ್ನು 9900128504 ದೂರವಾಣಿಯಲ್ಲಿ ಸಂಪರ್ಕಿಸಬಹುದಾಗಿದೆ.

ಕಾರ್ಯದರ್ಶಿ

ಇವರಿಗೆ:
ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು - ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:
1. ಉಪ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳ, ಬೆಂಗಳೂರು.
2. ಸಹಾಯಕ ನಿರ್ದೇಶಕರು(ಪರೀಕ್ಷೆ) ಮತ್ತು (ತಾಂತ್ರಿಕ), ತಾಂತ್ರಿಕ ಪರೀಕ್ಷಾ ಮಂಡಳ, ಬೆಂಗಳೂರು.
3. ಸಿಸ್ಟಂ ಅನಾಲಿಸ್ಟ್, ತಾಂತ್ರಿಕ ಪರೀಕ್ಷಾ ಮಂಡಳ, ಬೆಂಗಳೂರು.
4. ಪ್ರೋಗ್ರಾಮರ್(ಗಣಕ ಕೇಂದ್ರ), ತಾಂತ್ರಿಕ ಪರೀಕ್ಷಾ ಮಂಡಳ, ಬೆಂಗಳೂರು.
5. ರಿಜಿಸ್ಟ್ರಾರ್(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳ, ಬೆಂಗಳೂರು.
6. ಇಆರ್‌ಎಸ್/ಇಎಫಿ ಮತ್ತು ಆರ್‌ಡಿಎಂ(1) ರಿಂದ (15)ರ ವರೆಗಿನ ಕಾರ್ಯನಿರ್ವಾಹಕರು.
7. ಸ್ವೀಕೃತಿ ಹಾಗೂ ರವಾನೆ(ಪರೀಕ್ಷೆ) ವಿಭಾಗದವರು.
8. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
9. ನಿರ್ದೇಶಕರವರ ಆಪ್ತ ಶಾಖೆ.
10. ಕಾರ್ಯದರ್ಶಿಯವರ ಆಪ್ತ ಶಾಖೆ,
11. ಇ-ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
12. ಗಣಕ ಕೇಂದ್ರ – ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು.
13. ಶ್ರೀ ಹೆಚ್.ಟಿ.ಪ್ರಕಾಶ್, ತಾಂತ್ರಿಕ ಸಹಾಯಕರು – ಸಕಾಲ ಸೇವೆಗಳ ಉಸ್ತುವಾರಿ– ಮಾಹಿತಿಗಾಗಿ.